ದಂದುಗಗಳನ್ನು ನೋಡಿದರೆ ದೇವರು ಎಚ್ಚರವಾಗಿದ್ದಾನೆ ಎನ್ನುವುದಕ್ಕೆ ಸುಳಿವುಗಳೇನೂ ಇಲ್ಲ. ಸಿನಿಮಾದಲ್ಲಿ 'ನಿದ್ದೆ ಮಾಡೊ ದೇವರಂಥ ಗಾಂಧಿ' ಎನ್ನುವ ವಿಶೇಷಣ ಗಾಂಧಿಯ ವ್ಯಕ್ತಿತ್ವದ ಚೆಲುವು ಹಾಗೂ ಆ ವ್ಯಕ್ತಿತ್ವದಲ್ಲಿದ್ದಿರಬಹುದಾದ ಮುಗ್ಧತೆಯನ್ನು ಕುರಿತು ಹೇಳುವಂತಿದೆ. ಬಹುಶಃ, 'ಮಾಡಿ ಮಡಿದವರು' ಚಿತ್ರಕ್ಕಿಂತಲೂ ಮಿಗಿಲಾಗಿ ಗಾಂಧಿಯನ್ನು ಆಪ್ತವಾಗಿ ಮುಖಾಮುಖಿಯಾದ ಇನ್ನೊಂದು ಚಿತ್ರ ಕನ್ನಡದಲ್ಲಿ ಇರಲಿಕ್ಕಿಲ್ಲ.

1974ರಲ್ಲಿ ತೆರೆಕಂಡ ಕೆ.ಎಂ. ಶಂಕರಪ್ಪನವರ ನಿರ್ದೇಶನದ 'ಮಾಡಿ ಮಡಿದವರು' ಕನ್ನಡದ ಅತ್ಯುತ್ತಮ ಚಿತ್ರಗಳಲ್ಲೊಂದು. ಈ ಸಿನಿಮಾ ರೂಪುಗೊಳ್ಳುವಲ್ಲಿ ಭಾಗಿಯಾಗಿರುವ ಪ್ರತಿಭಾವಂತರ ತಂಡವೇ ಚಿತ್ರದ ಅನನ್ಯತೆಯನ್ನು ಸೂಚಿಸುವಂತಿದೆ. ನಿರ್ದೇಶಕ ಶಂಕರಪ್ಪನವರು ಪೂನಾದ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಿತುಬಂದವರು. ಚಿತ್ರದ ಕಥೆ ಪ್ರಖ್ಯಾತ ಕಾದಂಬರಿಕಾರ ಬಸವರಾಜ ಕಟ್ಟೀಮನಿ ಅವರ 'ಮಾಡಿ ಮಡಿದವರು' ಕಾದಂಬರಿಯನ್ನು ಆಧರಿಸಿದ್ದು. ಚಿತ್ರಕಥೆ ಮತ್ತು ಸಂಭಾಷಣೆ ರಚನೆಯಲ್ಲಿ ಕೂಡ ಶಂಕರಪ್ಪನವರೊಂದಿಗೆ ಕಟ್ಟೀಮನಿಯವರು ತೊಡಗಿಕೊಂಡಿದ್ದಾರೆ. ಹಿನ್ನೆಲೆ ಸಂಗೀತ ಭಾಸ್ಕರ ಚಂದಾವರ್ಕರ್ ಅವರದು. ಚಂದ್ರಶೇಖರ ಕಂಬಾರ, ಗೋಪಾಲಕೃಷ್ಣ ಅಡಿಗರೊಂದಿಗೆ ಕಟ್ಟೀಮನಿಯವರೂ ಗೀತರಚನೆಕಾರರ ಪಟ್ಟಿಯಲ್ಲಿದ್ದಾರೆ. ಮೈಸೂರು ಅನಂತಸ್ವಾಮಿ ಅವರೊಂದಿಗೆ ಕಂಬಾರ ಹಾಗೂ ಶಾರದಾ ಹಾನಗಲ್ ಅವರು ಸ್ವರಸಂಯೋಜಕರ ಪಟ್ಟಿಯಲ್ಲಿದ್ದಾರೆ. ಪ್ರಸಿದ್ಧ ಚಿತ್ರಕಲಾವಿದ ಆರ್ಯ ಅವರ ಕಲಾಕೃತಿಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. 'ಸಂಸ್ಕಾರ' (1970) ಚಿತ್ರದ ನಂತರ ವಿವಿಧ ಕ್ಷೇತ್ರಗಳ ಪ್ರತಿಭಾವಂತರು ತೊಡಗಿಕೊಂಡು ರೂಪಿಸಿದ ಯಶಸ್ವಿ ಪ್ರಯೋಗದ ರೂಪದಲ್ಲಿ 'ಮಾಡಿ ಮಡಿದವರು' ಚಿತ್ರವನ್ನು ಗುರ್ತಿಸಬಹುದು.

ಸ್ವಾತಂತ್ರ್ಯ ಚಳವಳಿಯಲ್ಲಿ ಹೋರಾಡಿ ಮಡಿದವರ ಕಥೆ 'ಮಾಡಿ ಮಡಿದವರು' ಚಿತ್ರದ್ದು. ಸಿನಿಮಾ ಶುರುವಾಗುವುದೇ 'ಓ ಭಾರತ ಬಾಂಧವ ನೆನೆ ನೆನೆ ಆ ದಿನವ' ಎನ್ನುವ ಭಾವುಕ ಗೀತೆಯೊಂದಿದೆ. ಆ ದಿನವಾದರೂ ಯಾವುದು? ಅದು, ಸ್ವಾತಂತ್ರ್ಯಪ್ರೇಮಿಗಳು ಹುತಾತ್ಮರಾದ ದಿನ. 1942ರ ಆಗಸ್ಟ್ 8ರಂದು ಮುಂಬೈನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ 'ಮಾಡಿರಿ, ಇಲ್ಲವೇ ಮಡಿಯಿರಿ' ಎಂದು ಗಾಂಧೀಜಿ ದೇಶವಾಸಿಗಳಿಗೆ ಕರೆನೀಡುತ್ತಾರೆ. ಆ ಕರೆಯ ಪರಿಣಾಮವೇ 'ಕ್ವಿಟ್ ಇಂಡಿಯಾ' (ಬ್ರಿಟೀಷರೇ ಭಾರತ ಬಿಟ್ಟು ತೊಲಗಿ) ಚಳವಳಿ. ಮಹಾತ್ಮನ ಕರೆಗೆ ದೇಶಕ್ಕೆ ದೇಶವೇ ಸ್ಪಂದಿಸಿತು. ಕರ್ನಾಟಕದಲ್ಲಿ ಕೂಡ ಚಳವಳಿಗೆ ಅಪಾರ ಜನಬೆಂಬಲ ವ್ಯಕ್ತವಾಯಿತು. ಈ ಚಳವಳಿ ಸಂದರ್ಭದಲ್ಲಿ, ಬೆಳಗಾವಿ ಪರಿಸರದಲ್ಲಿ ನಡೆದ ಸ್ವಾತಂತ್ರ್ಯ ಪ್ರೇಮಿಗಳ ಹೋರಾಟದ ಕಥನ ಚಿತ್ರದಲ್ಲಿದೆ.

ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವ ಚಿತ್ರಿಕೆಗಳನ್ನು ಹೊರತುಪಡಿಸಿದರೆ ಸಿನಿಮಾದಲ್ಲಿ ಗಾಂಧೀಜಿ ಎಲ್ಲಿಯೂ ಕಾಣಿಸುವುದಿಲ್ಲ. ಆದರೆ, ಇಡೀ ಚಿತ್ರದಲ್ಲಿ ಅಂತರ್ಜಲದ ರೂಪದಲ್ಲಿ ಗಾಂಧಿ ಕಾಣಿಸುತ್ತಾರೆ. ಮಹಾತ್ಮನ ಮಾತುಗಳನ್ನು ಚಾಚೂತಪ್ಪದೆ ಅನುಷ್ಠಾನಗೊಳಿಸುವ ಕಾರ್ಯಕರ್ತರ ರೂಪದಲ್ಲಿ ಗಾಂಧಿಯೇ ಕಾಣಿಸುತ್ತಾರೆ. ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರ ಚಳವಳಿ ಘೋಷಿಸಿದ ಗಾಂಧಿಯನ್ನು ಅಜ್ಞಾತ ಸ್ಥಳದಲ್ಲಿ ಬಂಧನದಲ್ಲಿಟ್ಟರೂ, ಚಳವಳಿಯ ಸೂತ್ರ ತಪ್ಪುವುದಿಲ್ಲ, ಕಾವು ಕಡಿಮೆಯಾಗುವುದಿಲ್ಲ. 'ಹೇಳ್ಯಾರ ನಮ್ಮ ಗಾಂಧಿ ಸರದಾರ / ನೀವ ನಿಮಗಿನ್ನ ನಾಯಕರ / ಹೋರಾಡಬೇಕು ಬಿಟ್ಟು ಮನಿಮಾರ' ಎನ್ನುವ ಸಾಲುಗಳೇ ಕಥೆಯನ್ನು ಹೇಳುವಂತಿದೆ.